Spl.C.83/2018
C.W.16 P.W.8

<u>ದಿಃ **06-03-2025** ರ ಆದೇಶದ ಮೇರೆಗೆ ಸಾಕ್ಷಿಯನ್ನು ದಿಃ **25-06-2025** ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ-</u>

5. ಯಾವುದೇ ವ್ಯಕ್ತಿಗೆ ಕೈಯಿಂದ ಬಲವಾಗಿ ಹೊಡೆದಾಗ ಅದು ತಾಗಿದ ಕಡೆ ಕೈಯ ಗುರುತುಗಳು ಕಂಡುಬರುತ್ತದೆ ಎಂದರೆ ಸರಿ. ವ್ಯಕ್ತಿಯ ಮೈಮೇಲೆ ಊತ ಆಕಸ್ಮಿಕವಾಗಿ ನೆಲದ ಮೇಲೆ ಬಿದ್ದ ಸಮಯದಲ್ಲೂ ಆಗುತ್ತದೆ ಎಂದರೆ ಸರಿ. ಒಬ್ಬ ವ್ಯಕ್ತಿಯ ಕೆನ್ನೆಗೆ ಬಲವಾಗಿ ಮುಷ್ಟಿ ಯಿಂದ ಹೊಡೆದರೆ ಒಳಭಾಗದಲ್ಲಿ ರಕ್ತಸ್ರಾವ ಅಥವಾ ಹರಿದ ಗಾಯವಾಗುವ ಸಾಧ್ಯತೆ ಇದೆ ಎಂದರೆ ಸರಿ. ನಾನು ನಿಪಿ.12 ರಲ್ಲಿ ತಿಳಿಸಿರುವ ಊತ ಯಾವುದರಿಂದ ಆಗಿದೆ ಎಂದು ಪರೀಕ್ಷಿಸಿ ತಿಳಿದುಕೊಂಡಿಲ್ಲ, ಆದರೆ ಗಾಯಾಳು ಹೇಳಿದ್ದರಿಂದ ಹಲ್ಲೆಯಿಂದ ಆಗಿದೆ ಎಂದು ಬರೆದುಕೊಂಡಿದ್ದೇನೆ. ಒಬ್ಬ ವ್ಯಕ್ತಿ ತಾನಾಗಿಯೇ ಹೊಡೆದುಕೊಂಡರೆ ನೀವು ಹೇಳಿರು ಊತವಾಗುವ ಸಾಧ್ಯತೆ ಇದೆ ಎಂದರೆ ಸಾಕ್ಷಿ ಆತ ಎಷ್ಟು ಬಲವಾಗಿ ಹೊಡೆದುಕೊಂಡಿದ್ದಾನೆ ಅದರ ಮೇಲೆ ನಿರ್ಧರಿತವಾಗುತ್ತದೆ ಎನ್ನುತ್ತಾರೆ. ಮುಟ್ಟಿದರೆ ನೋವು ಎಂದು ನಿಪಿ.12 ರಲ್ಲಿ ಬರೆದಿದ್ದಿರಿ ಅದನ್ನು ನೀವು ಕಣ್ಣಿನಿಂದ ನೋಡಿಲ್ಲ ಎಂದರೆ ಸಾಕ್ಷಿ ಕಣ್ಣಿನಿಂದ ನೋಡಿಲ್ಲ ಆದರೆ ಗಾಯಾಳು ಹೇಳಿದ್ದರಿಂದ ಬರೆದಿದ್ದೇನೆ ಎನ್ನುತ್ತಾರೆ.

<u>ಮರು ವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸ.ಇ.ಎ.ಓ.
ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

SC.102/2016
PW: 13